ತುವ:ಕೂರಿನಲ್ಲಿ 77 ಜನ ಇದ್ದಾರೆ. ಈ ಒಂದು ಸಂಖ್ಯೆಯನ್ನು ನೋಡಿಕೊಂಡು ಹಾಸ್ಟಲ್ ಫೆಸಿಲಿಟೀಸ್ ಅಲ್ಲಿ ಕೊಟ್ಟಿದ್ದಾರೆ. ಇನ್ನು ಕೆಲವು ಕಡೆ ಸರ್‌ಟನ್ ಪರ್ಸೆಂಟ್ ಎಂದರೆ 5 per cent of the children will be given seats in the avail ble Hostels in the respective areas. ಸರ್ಕಾರದ ಫಂಡ್‌ನಿಂದ ತಿಂಗಳಿಗೆ 200, 300 ರೂಪಾಯಿಗಳನ್ನು ಅವರ ಮಕ್ಕಳಿಗೆ ಕೊಡುತ್ತಿದ್ದಾರೆ.

1-30 P.M.

ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್ —ಸ್ವಾಮಿ, ಸೈನಿಕರು ಮತ್ತು ಮಾಜಿ ಸೈನಿಕರು ರಾಷ್ಟ್ರದ ರಕ್ಷಣೆಗೆ ಮತ್ತು ರಾಷ್ಟ್ರದ ಭದ್ರತೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಕೊಂಡು ಸರ್ವವಿಧದಲ್ಲಿಯೂ ರಕ್ಷಣೆಯನ್ನು ಕೊಡತಕ್ಕಂಥ ನೀತಿ ನಮ್ಮ ರಾಜ್ಯದಲ್ಲಿದೆ ಅವರಿಗೆ ಸೈಟ್‌ಗಳನ್ನು ಕೊಡುತ್ತಾ ಇಲ್ಲ, ಮನೆಗಳನ್ನು ಕೊಡುತ್ತಾ ಇಲ್ಲ, ಅವರಿಗೆ ಕೊಡತಕ್ಕಂಥ ಜಮೀನನ್ನು ಕೊಡುತ್ತಾರೆಂದರೆ ರಿಸರ್ವ್ ಮಾಡಿದ್ದರೂ ಕೊಡುತ್ತಾ ಇಲ್ಲ. ಹುದ್ದೆಗಳನ್ನು ಅವರಿಗಾಗಿ ರಿಸರ್ವ್ ಮಾಡಿದ್ದರೂ ಅವರಿಗೆ ಕೊಡುತ್ತಾ ಇಲ್ಲ ಎಂದು ತಿಳಿದು ಬಂದಿದೆ. ಈ ರೀತಿ ಅವರಿಂದ ತೊಂದರೆ ಇದೆ. ರಾಜ್ಯದಲ್ಲಿ 75,497 ಮಂದಿ ಇರತಕ್ಕಂಥ ಸೈನಿಕರ ರಕ್ಷಣೆಗಾಗಿ ಎಲ್ಲಾ ವಿಧವಾದ ಸಹಾಯವನ್ನೂ, ರಿಯಾಯಿತಿಯನ್ನೂ ಕೊಟ್ಟಿದೆಯೇ ಇಲ್ಲವೇ ಎನ್ನತಕ್ಕಂಥ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ತಾವು ವ್ಯವಸ್ಥೆಯನ್ನು ಮಾಡುತ್ತೀರೆಂಬ ಅಭಯವನ್ನು ಈ ಮನೆಗೆ ಕೊಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಈ ವ್ಯವಸ್ಥೆಯನ್ನು ಮಾಡುವುದಕ್ಕೆ ಸ್ಟೇಟ್ ಲೆವೆಲ್‌ನಲ್ಲಿ ಮತ್ತು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಬೋರ್ಡ್‌ಗಳು ಇವೆ. ಈ ಬೋರ್ಡ್‌ಗಳಲ್ಲಿ ಅವರ ಸಮಸ್ಯೆಗಳು ಆಗಿಂದಾಗ್ಗೆ ಚರ್ಚೆಯಾಗಿ ಕೆಲವು ಸಾಲಭ್ಯಗಳನ್ನು ಕೊಟ್ಟುಕೊಂಡು ಬರುತ್ತಿದ್ದಾರೆ. ಅರಾಟ್‌ಮೆಂಟ್ ಆಫ್ ಸೈಟ್ ಬೈ ದ ಬೆಂಗಳೂರು ಮತ್ತು ಮೈಸೂರಿನಲ್ಲಿ ಅವರಿಗೆ ಇಷ್ಟೇ ಕೊಡಬೇಕೆಂದು ನಿಗದಿ ಮಾಡಿದೆ. ಅಲ್ಲಿ ಪ್ರಜಾಸಂಖ್ಯೆ ಒಂದು ಲಕ್ಷಕ್ಕಿಂತ ಹೆಚ್ಚಾಗಿದ್ದರೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ನವರು ಸೈಟ್ ಅರಾಟ್ ಮಾಡುತ್ತಿದ್ದಾರೆ. ಇದರಲ್ಲೂ ಕೂಡ ಎಕ್ಸ್ ಸರ್ವೀಸ್ ಮೆನ್‌ಗೆ ಪ್ರಯಾರಿಟಿ ಕೊಡಿ ಎಂದು ಹೇಳಿದ್ದೇವೆ. ಅವರು ಎಲ್ಲವನ್ನೂ ಮಾಡುತ್ತಿದ್ದಾರೆ.

ಶ್ರೀ ಎಂ. ಎಂ. ಸಜ್ಜನ್.—ದೇಶಕಾರ್ಯಕ್ಕಾಗಿ ದುಡಿದಂತಹ ಮಾಜಿ ಸೈನಿಕರಿಗೆ ಅವರು ವಾಸ ಮಾಡುವುದಕ್ಕೆ ಜಾಗ ಇಲ್ಲದಿದ್ದರೆ ಹಿಂದುಳಿದವರಿಗೆ ಕೊಡುವ ಹಾಗೆ ಉಚಿತವಾಗಿ ನಿವೇಶನ ಕೊಡುವಂತಾದ್ದು ಅವಶ್ಯಕ ಇಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ಉಚಿತವಾಗಿ ಎಂದರೆ ಪೆನ್‌ಷನ್ ಬರುವವರಿಗೆ ಉಚಿತವಾಗಿ ಕೊಡುವುದಿಲ್ಲ. ಉಚಿತವಾಗಿ ಕೊಡುವುದು ಯಾರಿಗೆ ಎಂದರೆ ಲ್ಯಾಂಡ್‌ಲೆಸ್, ಹೌಸ್‌ಲೆಸ್ ಜನರಿಗೆ ಉಚಿತವಾಗಿ ಕೊಡಬೇಕು ಎಂದು ಮಾಡಿದ್ದೇವೆ. ಅವರಿಗೆ ಸೈಟ್ ಅನ್ನು ಉಚಿತವಾಗಿ ಕೊಡುವುದನ್ನು ಮಾಡಬೇಕಾಗಿದೆ. ಮಾಜಿ ಸೈನಿಕರಿಗೆ ಉಚಿತವಾಗಿ ಕೊಡಬೇಕು ಎಂದು ಹೇಳುವುದಕ್ಕಾಗುವುದಿಲ್ಲ.

Police Quarters at Muddebihal

298. SRI M.M. SAJJAN (Muddebihal).—Will the Chief Minister be pleased to state .—

(*a*) whether Government is aware that the Police Quarters at Muddebihal Town have become unfit for dwelling.

(*b*) whether any representations are pending before Government for immediately constructing new houses for the Police at Muddebihal ?

SRI D. DEVARAJ URS (Chief Minister).—

(*a*) No.

(*b*) No.

ಶ್ರೀ ಎಂ.ಎಂ. ಸಜ್ಜನ್.—ಸ್ವಾಮಿ, ನನಗೆ ಗೊತ್ತಿದ್ದ ಹಾಗೆ ಮುದ್ದೆಬಿಹಾಳ ನಗರದಲ್ಲಿ ಪೋಲೀಸರು ವಾಸಮಾಡತಕ್ಕಂಥ ಕಟ್ಟಡಗಳು ಅಯೋಗ್ಯ ಹಾಗೂ ಅನುಪಯುಕ್ತವಾಗಿವೆ ಎನ್ನುವ ತಕ್ಕಂಥ ವಿಚಾರದಲ್ಲಿ ಬಿಜಾಪುರ ಜಿಲ್ಲೆಯ ಎಸ್.ಪಿ. ಸಾಹೇಬರು ಪರಾ ಮಾಡಿಸಿರುವುದು ಗೊತ್ತಿದೆ. ತಮ್ಮ ಉತ್ತರದಲ್ಲಿ ಗೊತ್ತಿಲ್ಲ ಎಂದು ಹೇಳಿದ್ದೀರಿ. ಇಂತಹ ಪ್ರಸಂಗಗಳಲ್ಲಿ ಪೋಲೀಸರು ವಾಸ ಮಾಡುವ ಕಟ್ಟಡಗಳಲ್ಲಿ ಅನಾಹುತ ಆಗುವ ಸಂಭವ ಇದೆ. ಆದ್ದರಿಂದ ಪೋಲೀಸರಿಗೆ ಹೊಸ ಕಟ್ಟಡವನ್ನು ಕಟ್ಟಿಸತಕ್ಕಂಥ ಪಚನವನ್ನು ಕೊಡುತ್ತೀರಾ ?

† ಶ್ರೀ ಡಿ. ದೇವರಾಜ ಅರಸ್ —ಮುದ್ದೇಬಿಹಾಳದಲ್ಲಿ 25 ಪೋಲೀಸ್ ಕ್ವಾರ್ಟರ್ಸ್ ಇವೆ. ಅಲ್ಲಿ ಪೋಲೀಸರು ವಾಸ ಮಾಡುತ್ತಿದ್ದಾರೆ. ಅವೆಲ್ಲಾ ಹಳೆಯ ಕ್ವಾರ್ಟರ್ಸ್‌ಗಳು ಆಗಿವೆ. ಅದರಲ್ಲಿ ಲೀಕ್ ಆಗುತ್ತಾ ಇರತಕ್ಕಂಥ ರೂಫ್‌ಗಳನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯವರು ರಿಪೇರಿ ಮಾಡಿದ್ದಾರೆ ಅಕಸ್ಮಾತ್ ಅಲ್ಲಿ ರಿಪೇರಿ ಮಾಡಿಲ್ಲ ಎಂದು ಹೇಳಿದರೆ ಅದನ್ನು ಮಾಡಿಸುತ್ತೇನೆ. ನಾವು ಬೇರೆ ಕ್ವಾರ್ಟರ್ಸ್ ಕೊಡಬೇಕು ಎಂದು ಹೇಳಿ 6 ಎಕರೆ ಜಮೀನನ್ನು ಬಿದರೆಕುಂಚೆ ಎಂಬ ವಿಲೇಜ್‌ನಲ್ಲಿ ಅಕ್ವೈರ್ ಮಾಡಿದ್ದೇವೆ. ಸುಮಾರು 1 ಲಕ್ಷ 8 ಸಾವಿರ ರೂಪಾಯಿಗಳ ಪೆಚ್ಚಿದಲ್ಲಿ ಪೆರೇಡ್ ಗ್ರೌಂಡ್ ಇವನ್ನೆಲ್ಲಾ ಮಾಡಬೇಕೆಂದು ಇದೆ. ಆನೇಲೆ ಮನೆಗಳನ್ನು ಕಟ್ಟುವ ವಿಚಾರವನ್ನು ತೆಗೆದುಕೊಳ್ಳುತ್ತೇವೆ

ಶ್ರೀ ಎಂ.ಎಂ. ಸಜ್ಜನ್.—ಈ ಮನೆಗಳನ್ನು ಕಟ್ಟುವ ವಿಚಾರವನ್ನು ಎಷ್ಟು ದಿವಸದಲ್ಲಿ ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ಈಗಾಗಲೇ ಜಮೀನು ತೆಗೆದುಕೊಂಡಿದ್ದೇವೆ. ಇದಾದಮೇಲೆ ಮನೆ ಕಟ್ಟುವ ವಿಚಾರ ಇದೆ

Closure of Shankara Textile Mills, Davanagere

303 SRI M. S. KRISHNAN (Malleswaram) :—Will the Minister for Labour be pleased to state :—

(*a*) when the Shankara Textile Mills, Davangere was closed and the reasons for the same ;

(*b*) the action the Government is taking in order to get the Mills re-opened and provide work for all the workers of Shankara Textile Mills ?

SRI C. N. PATIL (Minister for Labour).—

(*a*) The Mills resorted to a gradual lay-off of workers from 1st September 1975 due to financial crisis and all the workers are laid-off from June 1976 ·

(*b*) The Standing Expert Committee of the National Industrial Committee on Textiles (Private Sector) is investigating into the case.

ಶ್ರೀ ಎಂ. ಎಸ್. ಕೃಷ್ಣನ್ .—ಸ್ವಾಮಿ. ಈ ಶಂಕರ್ ಟೆಕ್ಸ್‌ಟೈಲ್ಸ್ ಮಿಲ್ಸ್ ಕೆಲಸಗಾರರನ್ನು ಲೇ ಆಫ್ ಮಾಡುವುದಕ್ಕೆ ಸರ್ಕಾರದವರು ಲೇಆಫ್ ಕೊಟ್ಟಿಲ್ಲವೆಂದು ಹೇಳಿದ್ದೀರಿ.